**ದಿ.೦೯-೦೩-೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ೪ ನೇ ಪ್ರತಿವಾದಿ ಪರ ಶ್ರೀ.ಸಿ.ಎಸ್.ಎಸ್ ವಕೀಲರಿಂದ.**

ನಮ್ಮ ತಂದೆ ೧೯೭೫ ತರೀಕೆರೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿ ೧೯೭೫-೭೬ ನೇ ಪೂರ್ವದಲ್ಲಿ ತರೀಕೆರೆಗೆ ಬಂದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ೧೯೭೫ ರಲ್ಲಿ ತರೀಕೆರೆಗೆ ಬರುವ ಪೂರ್ವದಲ್ಲಿ ಮಂಗೇನಹಳ್ಳಿ ಜಮೀನುಗಳನ್ನು ನನ್ನ ಚಿಕ್ಕಪ್ಪ ಅವರಿಗೆ ವಹಿಸಿಕೊಟ್ಟು ಬಂದಿರುತ್ತಾರೆ ಎಂದರೆ ಸರಿ. ಅಂದಿನಿಂದ ಇಂನವರೆಗೂ ಮಂಗೇನಹಳ್ಳಿಯ ಜಮೀನನ್ನು ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ತಾಯಮ್ಮ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ಮಂಗೇನಹಳ್ಳಿಯ ಜಮೀನನ್ನು ವಹಿಸಿಕೊಟ್ಟ ನಂತರ ಅದರ ಯಾವುದೇ ಆದಾಯವನ್ನು ಪಡೆದುಕೊಂಡಿಲ್ಲ. ದಾವ ಐಟಂ ನಂ.೧ ರ ಆಸ್ತಿಯನ್ನು ನನ್ನ ತಂದೆ ಸ್ವಂತವಾಗಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಮಂಗೇನಹಳ್ಳಿಯ ಜಮೀನನ್ನು ನನ್ನ ಚಿಕ್ಕಪ್ಪನಿಗೆ ವಹಿಸಿಕೊಟ್ಟ ನಂತರ ಅದರಿಂದ ಬಂದ ಹಣದಿಂದ ದಾವ ಐಟಂ ನಂ.೧ ರ ಆಸ್ತಿಯನ್ನು ಖರೀದಿಸಿರುತ್ತಾರೆ. ನನ್ನ ಚಿಕ್ಕಪ್ಪನಿಗೆ ಮಂಗೇನಹಳ್ಳಿಯ ಜಮೀನನ್ನು ವಹಿಸಿಕೊಟ್ಟಿದ ನಂತರ ಅದಕ್ಕೆ ಹಣ ಪಡೆದಿರುವ ಬಗ್ಗೆ ದಾಖಲಾತಿ ಇರುವುದಿಲ್ಲ. ಎ ಸಿ ನ್ಯಾಯಾಲಯದಲ್ಲಿ ಮಂಗೇನಹಳ್ಳಿ ಜಮೀನನ್ನು ನನ್ನ ಚಿಕ್ಕಪ್ಪನಿಗೆ ವಹಿಸಿಕೊಟ್ಟ ನಂತರ ಅದರಿಂದ ಬಂದ ಹಣದಿಂದ ದಾವ ಐಟಂ ನಂ.೧ ರ ಆಸ್ತಿಯನ್ನು ಖರೀದಿಸಿರುತ್ತೇವೆ ಎಂದು ನಿಮ್ಮ ತಂದೆ ಹೇಳಿಲ್ಲ ಎಂದರೆ ಸಾಕ್ಷಿ ಎಸಿ ನ್ಯಾಯಾಲಯಕ್ಕೆ ಎಂದು ಹಾಜರಾಗಿಲ್ಲ ಎಂದು ನುಡಿಯುತ್ತಾರೆ ನನ್ನ ತಕರಾರಿನಲ್ಲಿ ನನ್ನ ತಂದೆ ಎಸಿ ನ್ಯಾಯಾಲಯಕ್ಕೆ ಎಂದು ಹಾಜರಾಗಿಲ್ಲ ಎಂದು ತಿಳಿಸಿಲ್ಲ. ನಿಡಿ-೫೯ ರ ಕ್ರಯ ಪತ್ರದಲ್ಲಿ ಮಂಗೇನಹಳ್ಳಿಯ ಜಮೀನನ್ನು ನನ್ನ ಚಿಕ್ಕಪ್ಪನಿಗೆ ವಹಿಸಿಕೊಟ್ಟ ನಂತರ ಅದರಿಂದ ಬಂದ ಹಣದಿಂದ ದಾವ

ಐಟಂ ನಂ.೧ ರ ಆಸ್ತಿಯನ್ನು ಖರೀದಿಸಿದ್ದೇವೆ ಎಂದು ಒಕ್ಕಣಿಕೆ ಇಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿ ೨೦೦೮ ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಮರಣ ಹೊಂದಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನನ್ನ ತಾಯಿ ದಿ.೦೮/೦೪/೨೦೦೫ ರಂದು ಮರಣ ಹೊಂದಿರುತ್ತಾರೆ ಎಂದರೆ ಇರಬಹುದು ನಾನು ಮರೆತಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಾಯಿ ಜೀವಾಂತವಾಗಿದ್ದಾಗ ನಾನು ಒಂದು ಟ್ರಾಕ್ಟರ್ ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಟ್ರಾಕ್ಟರ್ ಅನ್ನು ನಾನು ಬೇರೆಯವರ ಜಮೀನಿನಲ್ಲಿ ಉಪಯೋಗಿಸಲು ಹೋಗುತ್ತಿದ್ದೆ ಎಂದರೆ ಸರಿ. ಸದರಿ ಟ್ರಾಕ್ಟರ್ ನಲ್ಲಿ ನಾನು ವ್ಯವಸಾಯದ ಸಾಮಗ್ರಿ ಮತ್ತು ಇತರೆ ಸಾಮಾಗ್ರಿಗಳನ್ನು ಸಾಗಾಟ ಮಾಡಲು ಬಾಡಿಗೆಗೆ ಹೋಗುತ್ತಿದ್ದೆ ಎಂದರೆ ಸರಿ. ನನ್ನ ತಾಯಿ ಮರಣ ಹೂಂದಿದ ನಂತರ ನಾನು ಟ್ರಾಕ್ಟರ್ ಅನ್ನು ಮಾರಾಟ ಮಾಡಿ ಬೆಂಗಳೂರಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಟ್ರಾಕ್ಟರ್ ಮಾಡಿದ್ದೇನೆ ಆದರೆ ಬೆಂಗಳೂರಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಟ್ರಾಕ್ಟರ್ ಅನ್ನು ಖರೀದಿಸಲು ನಾನು ಕೆ ಎಸ್ ಎಫ್ ಸಿ ಚಿಕ್ಕಮಗಳೂರಿನಿಂದ ಸಾಲ ಪಡೆದಿರುತ್ತೇನೆ. ಸದರಿ ಸಾಲವನ್ನು ನಾನು ೨೦೦೫ ರಲ್ಲಿ ಒಂದೇ ಕಂತಿನಲ್ಲಿ ತೀರಿಸಿರುತ್ತೇನೆ ಎಂದರೆ ಸರಿ.

೨೦೦೫ ರಿಂದ ೨೦೧೪ ವರೆಗೂ ನಾನು ದೊರನಾಳು ಗ್ರಾಮದಲ್ಲಿ ಎಂದಿಗೂ ವಾಸವಾಗಿಲ್ಲ ಎಂದರೆ ಸರಿಯಲ್ಲ. ಮಲ್ಲೆಶಪ್ಪ ಮತ್ತು ಶಂಕರಪ್ಪ ಬೇರೆ ಊರಿನಲ್ಲಿ ವಾಸವಾಗಿದ್ದ ಕಾರಣ ನನ್ನ ತಂದೆ ಬಸಪ್ಪ ೪ ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ೪ ನೇ ಪ್ರತಿವಾದಿ ಮತ್ತು

ಆತನ ಪತ್ನಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಅವರಿಬ್ಬರು ಸರ್ಕಾರಿ ನೌಕರರಾಗಿದ್ದು ನನ್ನ ತಂದೆಯನ್ನು ಯಾವ ಟೈಮ್ ನಲ್ಲಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

೨೦೧೮ ರಲ್ಲಿ ಮುನಿಸಿಪಾಲಿಟಿ ಯವರ ಅರಜಿನಲ್ಲಿ ಮಳಿಗೆ ಬಾಡಿಗೆಗೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ೨೦೦೮ ರಲ್ಲಿ ಪಡೆರುತ್ತೇನೆ ಎಂದು ನುಡಿಯುತ್ತಾರೆ. ೨೦೦೮ ರಲ್ಲಿ ನಾನು ಮಳಿಗೆಯನ್ನು ಬಾಡಿಗೆಗೆ ಪಡೆದಿದ್ದೇನೆ ಎಂದು ತೋರಿಸಲು ಕಾಲವಕಾಶ ನೀಡಿದರೆ ತೋರಿಸುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲತಿಯನ್ನು ತೋರಿಸಿ ಮುನಿಸಿಪಾಲಿಟಿ ಅವರೊಂದಿಗೆ ಮಾಡಿಕೊಂಡ ಕರಾರು ಎಂದರೆ ಹೌದು ಎನ್ನುತ್ತಾರೆ ಆ ಕಾರಣಕ್ಕೆ ಅದನ್ನು ನಿಡಿ-೬೮ ಎಂದು ಗುರುತಿಸಲಾಗಿದೆ. ಸಾಕ್ಷಿ ನಾನು ಸ್ವಾಧೀನದಲ್ಲಿ ೨೦೦೮ ರಿಂದ ಇದ್ದು ೨೦೧೪ ರಲ್ಲಿ ಕರಾರು ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿಡಿ-೬೮ ರಲ್ಲಿ ನಾನು ಮಳಿಗೆಯ ಸ್ವಾಧೀನದಲ್ಲಿ ೨೦೦೮ ರಿಂದ ಇದ್ದೆ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ.

೪ ನೇ ಪ್ರತಿವಾದಿಯ ಪತ್ನಿ ಯಾವಗಲಿಂದಲೂ ಸರ್ಕಾರಿ ನೌಕರಿಯಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ೪ ನೇ ಪ್ರತಿವಾದಿಯ ಪತ್ನಿ ಹೈಸ್ಕೂಲ್ ಟೀಚರ್ ಎಂದರೆ ಸರಿ. ದಾವ ಆಸ್ತಿ ಐಟಂ. ನಂ.೫ ಖರೀದಿಸುವಾಗ ಚಂದ್ರಶೇಖರ್ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸಾಕ್ಷಿ ಹಣದ ಮೂಲ ಒಟ್ಟು ಕುಟುಂಬದ್ದಾಗಿರುತ್ತದೆ ಎಂದು ಹೇಳುತ್ತಾರೆ. ದಾವ ಆಸ್ತಿ ಐಟಂ. ನಂ.೫ ಅನ್ನು ಚಂದ್ರಶೇಖರ್ ಒಟ್ಟು ಕುಟುಂಬದ ಹಣದಿಂದ ಖರೀದಿಸಿರುತ್ತಾರೆ ಎಂದು ತೋರಿಸಲು ನನ್ನ ಬಳಿ

ಯಾವುದೇ ದಾಖಲಾತಿ ಇರುವುದಿಲ್ಲ. ಸದರಿ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ನಾನು ಅದು ಒಟ್ಟು ಕುಟುಂಬದ ಹಣದಿಂದ ಖರೀದಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿ ಐಟಂ. ನಂ.೫ ರಲ್ಲಿ ಡ್ಯೂಪ್ ಲೆಕ್ಸ್ ಮನೆ ಕಟ್ಟಲಾಗಿದೆ ಎಂದರೆ ಸರಿ. ಸಾಕ್ಷಿ ಅದು ಒಟ್ಟು ಕುಟುಂಬದ ಹಣದಿಂದ ಕಟ್ಟಾಲಾಗಿದೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ಕಟ್ಟಲು ಎಸ್.ಬಿ.ಐ ಯಿಂದ ಸಾಲ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಕಟ್ಟಲು ಒಟ್ಟು ಕುಟುಂಬದ ಹಣ ನೀಡಲಾಗಿದೆ ಎಂದು ತೋರಿಸಲು ದಾಖಲಾತಿಗಳು ಇಲ್ಲ ಸಾಕ್ಷಿ ಮುಂದುವರೆದು ಸಂಪೂರ್ಣ ಕುಟುಂಬದ ವ್ಯವಹಾರವನ್ನು ೪ ನೇ ಪ್ರತಿವಾದಿಯೇ ಮಾಡುತ್ತಿದ್ದು ಅವರ ಬಳಿಯೇ ಎಲ್ಲಾ ದಾಖಲಾತಿ ಇದೆ ಎಂದು ಹೇಳುತ್ತಾರೆ. ೪ ನೇ ಪ್ರತಿವಾದಿ ಕುಟುಂಬದ ವ್ಯವಹಾರ ಮತ್ತು ಹಿರಿತನವನ್ನು ಮಾಡುತ್ತಿದ್ದರು ಎಂದು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ನಿಮ್ಮ ತಂದೆ ಜೀವಾಂತವಾಗಿದ್ದಾಗ ೪ ನೇ ಪ್ರತಿವಾದಿಯೇ ಮನೆತನದ ಹಿರಿತನವನ್ನು ಮಾಡುತ್ತಿದ್ದರು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ಸರ್ಕಾರಿ ಕಛೇರಿಗೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಎಲ್ಲಾ ಕೆಲಸವನ್ನು ೪ ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಹಾಗೂ ನನ್ನ ತಂದೆಯ ಪೋಸ್ಟ್ ಆಫೀಸ್ ಅಕೌಂಟ್ ಅನ್ನು ೪ ನೇ ಪ್ರತಿವಾದಿಯು ತನ್ನ ಹೆಸರಿಗೆ ಒಪನ್ ಮಾಡಿಕೊಂಡು ಆತನೆ ಹಣವನ್ನು ಪಡೆದಿರುತ್ತಾನೆ ಎಂದು ಹೇಳುತ್ತಾರೆ. ೪ ನೇ ಪ್ರತಿವಾದಿಯು ಪೋಸ್ಟ್ ಆಫೀಸ್ ಅಕೌಂಟ್ ನಲ್ಲಿ ಪೊರ್ಜರಿ ಮಾಡಿದ್ದಾರೆ ಎಂದು ನಾನು ಯಾವುದೇ ದೂರು ಸಲ್ಲಿಸಿಲ್ಲ. ಪೊರ್ಜರಿ ಮಾಡಿದ್ದಾರೆ ಎಂದು ತಕರಾರಿನಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಪ್ರಕರಣ ನ್ಯಾಯಾಲಯದಲ್ಲಿರುವ ಕಾರಣ ಸಲ್ಲಿಸಿಲ್ಲ ಎಂದು

ನುಡಿಯುತ್ತಾರೆ. ನನ್ನ ತಂದೆಯ ಅಕೌಂಟ್ ಅನ್ನು ಪೋರ್ಜರಿ ಮಾಡಿ ತೆರೆಯಲಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಓಡಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯೇ ಸ್ವಯಂ ಆಗಿ ಪೋಸ್ಟ್ ಆಫೀಸ್ ಅಕೌಂಟ್ ತೆರೆದಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಸ್ವಲ್ಪ ಮಾಹಿತಿ ಇರುತ್ತದೆ. ನಾನು ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ. ಸಾಮಾನ್ಯವಾಗಿ ಬ್ಯಾಂಕ್ ನಲ್ಲಿ ಖಾತೆ ಪ್ರಾರಂಭಿಸಿದರೆ ಅದಕ್ಕೆ ನಾಮಿನಿಯನ್ನು ಬರೆಸಿಕೊಳ್ಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಬ್ಯಾಂಕ್ ನಲ್ಲಿ ನಾಮಿನಿ ಮಾಡಿದ ವ್ಯಕ್ತಿಗೆ ಹಣ ಸಲ್ಲುತ್ತೆ ಎಂದರೆ ಸರಿ. ಪೋಸ್ಟ್ ಆಫೀಸ್ ಅಕೌಂಟ್ ನಲ್ಲಿ ೪ ನೇ ಪ್ರತಿವಾದಿಯನ್ನು ನಾಮಿನಿ ಮಾಡಿದ ಕಾರಣ ಎಲ್ಲಾ ಹಣವನ್ನು ಆತನಿಗೆ ನೀಡಿದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬ್ಯಾಂಕ್ ನಲ್ಲಿ ಸಾಲ ಮಾಡಿದರೆ ಸಾಲ ಪಡೆದವರ ಆರ್ಥಿಕ ಸಾಮರ್ಥ್ಯವನ್ನು ಪರೀಶೀಲಿಸಿ ಸಾಲ ಕೊಡುತ್ತಾರೆ ಎಂದರೆ ಸರಿ. ಸಾಮನ್ಯವಾಗಿ ಬ್ಯಾಂಕ್ ನಲ್ಲಿ ಬ್ಯುಸೆನೆಸ್ ಮ್ಯಾನ್ ಎಂದು ತೋರಿಸಿ ಸಾಲ ಪಡೆದರೆ ಐ ಟಿ ರಿಟನ್ಸ್ ಅನ್ನು ಪಡೆದುಕೊಳ್ಳುತ್ತಾರೆ ಹಾಗೂ ಸರ್ಕಾರಿ ನೌಕರ ಎಂದು ತೋರಿಸಿದರೆ ಸ್ಯಾಲರಿ ಸರ್ಟಿಫಿಕೇಟ್ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಐಟಂ ನಂ.೫ ರಲ್ಲಿ ಮನೆ ಕಟ್ಟಲು ೪ ನೇ ಪ್ರತಿವಾದಿ ಮತ್ತು ಆತನ ಪತ್ನಿಯ ಸ್ಯಾಲರಿ ಸರ್ಟಿಫಿಕೇಟ್ ರ ಅವಲಂಭಿತವಾಗಿ ೨೦ ಲಕ್ಷ ಹಣ ಮಂಜೂರು ಮಾಡಲಾಗಿದೆ ಎಂದರೆ ಸಾಕ್ಷಿ ಉದ್ದೇಶ ಪೂರ್ವಕವಾಗಿ ಆ ರೀತಿ ತೋರಿಸಿ ಸಾಲ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಐಟಂ ನಂ.೫ ರ ಆಸ್ತಿ ಮತ್ತು ಮನೆಯನ್ನು ಬ್ಯಾಂಕಿಗೆ ಅಡಮಾನ ಮಾಡಲಾಗಿದೆ

ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.೫ ರ ಆಸ್ತಿಯ ಮೇಲೆ ಸಾಲ ಪಡೆದ ಬಗ್ಗೆ ಬ್ಯಾಂಕಿನಲ್ಲಿ ವಿಚಾರಿಸಿಲ್ಲ. ಸರ್ಕಾರಿ ನೌಕರರು ಸಾಲ ಪಡೆದ ಬಗ್ಗೆ ತಮ್ಮ ಕಛೇರಿಯಲ್ಲಿ ತಿಳಿಸಬೇಕು ಎಂದರೆ ಸರಿ. ಅದೇ ರೀತಿ ಆಸ್ತಿಗಳನ್ನು ಖರೀದಿಸಿದರೂ ಸಹ ತಮ್ಮ ಕಛೇರಿಯಲ್ಲಿ ತಿಳಿಸಬೇಕು ಎಂದರೆ ಸರಿ. ಐಟಂ ನಂ.೫ ರ ಆಸ್ತಿಯನ್ನು ಖರೀದಿಸಿರುವ ಬಗ್ಗೆ ೪ ನೇ ಪ್ರತಿವಾದಿಯು ತಮ್ಮ ಕಛೇರಿಯಲ್ಲಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಐಟಂ ನಂ.೬ ನ ನಿವೇಶನವು ಗಾಳಿಹಳ್ಳಿಯ ಸರ್ವೇ ನಂ.೪೩ ರ ಒಂದು ಭಾಗ ಎಂದರೆ ಸರಿ. ಸದರಿ ಜಮೀನು ಮೂಲತಃ ಸಂಜಿವಯ್ಯ ಬಿನ್ ಪೋತಯ್ಯ ಅವರ ಹೆಸರಿನಲ್ಲಿತ್ತು ಎಂದರೆ ಸರಿ. ದಿ.೦೮/೦೧/೨೦೦೪ ಮತ್ತು ೧೫/೦೭/೨೦೦೪ ರಲ್ಲಿ ಸದರಿ ಜಮೀನನ್ನು ೨ ಬಾರಿ ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ಸರಿ. ಭೂ ಪರಿವರ್ತನೆ ಆದ ನಂತರ ಅದರಲ್ಲಿ ಹಲವಾರು ನಿವೇಶನಗಳನ್ನು ಮಾಡಲಾಗಿದೆ ಎಂದರೆ ಸರಿ. ಸದರಿ ನಿವೇನಗಳ ಪೈಕಿ ಐಟಂ ನಂ.೬ ರ ಆಸ್ತಿಯನ್ನು ೪ ನೇ ಪ್ರತಿವಾದಿಯು ದಿ.೧೧/೦೩/೨೦೦೫ ರಂದು ಖರೀದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಐಟಂ ನಂ.೬ ರ ಆಸ್ತಿಯನ್ನು ೪ ನೇ ಪ್ರತಿವಾದಿ ಮತ್ತು ಪತ್ನಿಗೆ ಬಂದ ಸಂಬಳದಿಂದ ಖರೀದಿಸಿರುವುದು ಎಂದರೆ ಸರಿಯಲ್ಲ. ಐಟಂ ನಂ.೬ ರ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ನಾನು ಅದನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಮಗೆ ಯಾವುದೇ ಒಟ್ಟು ಕುಟುಂಬದ ಇರಲಿಲ್ಲ ಹಾಗೂ ಒಟ್ಟು ಕುಟುಂಬದ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ದಾವ ಐಟಂ ನಂ.೭ ಮೂಲತಃ ಪುರಸಭೆಗೆ ಸೇರಿದ ಆಸ್ತಿ ಎಂದರೆ ಸರಿ. ಪುರಸಭೆಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಬೇಕಾದರೆ ಅದು ಅರಜಿನ ಮುಖಾಂತರ ಆಗಬೇಕು ಎಂದರೆ ಸರಿ. ದಾವ ಐಟಂ ನಂ.೭ ರ ಆಸ್ತಿಯನ್ನು ಮಾರಾಟ ಮಾಡಲು ದಿ.೦೧/೧೨/೨೦೧೧ ರಲ್ಲಿ ನೋಟಿಫಿಕೇಶನ್ ಮಾಡಿದ್ದರು ಎಂದರೆ ಸರಿ. ನಿಡಿ-೬೮ ರಲ್ಲಿ ತೋರಿಸಲಾದ ಮಳಿಗೆಯನ್ನು ನಾನು ಅರಜಿನ ಮೂಲಕ ಬಾಡಿಗೆಗೆ ಪಡೆದಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಅರಜಿನ ಮೂಲಕ ಪಡೆದರೆ ಅದಕ್ಕೆ ಠೇವಣಿ ಇಡಬೇಕು ಎಂದರೆ ಸರಿ. ಮಳಿಗೆಯನ್ನು ನಾನು ನನ್ನ ಸ್ವಂತಕ್ಕಾಗಿ ಅರಜಿನಲ್ಲಿ ಬಾಡಿಗೆಗೆ ಪಡೆದಿರುತ್ತೇನೆ. ಐಟಂ ನಂ.೭ ಅನ್ನು ೪ ನೇ ಪ್ರತಿವಾದಿಯು ತನ್ನ ಸ್ವಂತ ಖರ್ಚಿನಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುವುದು ಎಂದು ಹೇಳುತ್ತಾರೆ. ಐಟಂ ನಂ.೭ ಅನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿತ್ತಿದ್ದೇವೆ ಎಂದು ನಾನು ಯಾವುದೇ ಅರ್ಜಿಯನ್ನು ಪುರಸಭೆಗೆ ಕೊಟ್ಟಿಲ್ಲ. ಐಟಂ ನಂ.೭ ಅರಜಿನಲ್ಲಿ ೪ ನೇ ಪ್ರತಿವಾದಿ ತನ್ನ ಸ್ವಂತ ದುಡ್ಡಿನಿಂದ ಖರೀದಿಸಿದ್ದು ಎಂದರೆ ಸರಿಯಲ್ಲ. ದಾವ ಐಟಂ ನಂ.೫ ರಿಂದ ೭ ರ ಮೇಲೆ ನನಗಾಗಲಿ ಅಥವಾ ಇತರೆ ಪ್ರತಿವಾದಿಗಾಗಲಿ ಅಥವಾ ವಾದಿಗಾಗಲಿ ಹಕ್ಕಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ೧ ಮತ್ತು ೨ ನೇ ಪ್ರತಿವಾದಿ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿ. ೧ ನೇ ಪ್ರತಿವಾದಿಗೆ ತರೀಕೆರೆ ಬಾಪೂಜಿ ನಗರದಲ್ಲಿ ೨ ನಿವೇಶನ ಇದ್ದು ಅದು ೩೦x೫ ಅಡಿ ಇದೆ ಎಂದರೆ ಸರಿ. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಅದು ಸುಮಾರು ವರ್ಷದ ಹಿಂದೆಯೇ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ತಕರಾರಿನಲ್ಲಿ ನಾವು ಸದರಿ ಆಸ್ತಿಯನ್ನು ಸೇರಿಸಿರುವುದಿಲ್ಲ. ಸ್ವಾಮಿ ವಿವೇಕಾನಂದ ಬಡಾವಣೆ ಶಿವಮೊಗ್ಗದಲ್ಲಿ ಸುಡಾಯಿಂದ ಅನುಮೋದಿತವಾದ ಒಂದು ನಿವೇಶನವು ೧ ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ೪ ನೇ ಪ್ರತಿವಾದಿ ತನ್ನ ಲಿಖಿತ ತಕರಾರಿನಲ್ಲಿ ತಿಳಿಸಿದ್ದು ಅದರ ಬಗ್ಗೆ ದಾಖಲಾತಿಯನ್ನು ನಾನು ಪರೀಶಿಲಿಸಿಲ್ಲ. ೧ ನೇ ಪ್ರತಿವಾದಿಯು ಬಿಳೇಕಲ್ಲಹಳ್ಳಿ ಬನ್ನೇರುಘಟ್ಟ ದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ೧ ನೇ ಪ್ರತಿವಾದಿಯ ೪ ಹಂತಸ್ತಿನ ಮನೆಯಲ್ಲಿದ್ದಾರೆ ಎಂದರೆ ಸರಿ. ಅದು ಅವರ ಬಾಡಿಗೆ ಎಂದು ನುಡಿಯುತ್ತಾರೆ. ೧ ನೇ ಪ್ರತಿವಾದಿಯ ಹೆಂಡತಿ ದ್ರಾಕ್ಷಾಯಿಣಿ ಎಂದರೆ ಸರಿ. ೧ ನೇ ಪ್ರತಿವಾದಿ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ. ೧ ನೇ ಪ್ರತಿವಾದಿಯು ಬನ್ನೇರುಘಟ್ಟ ರಸ್ತೆಯಲ್ಲಿರುವ ಮನೆಯನ್ನು ತನ್ನ ಪತ್ನಿಯ ಹೆಸರಿಗೆ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿರುವ ಎಲ್ಲಾ ಆಸ್ತಿಗಳನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂ.೪೧/೧ ಎ೧ ರ ೩ ಎಕರೆ ಜಮೀನನ್ನು ನನ್ನ ಪತ್ನಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಅದು ನನ್ನ ಆಸ್ತಿಯಲ್ಲ ಎಂದು

ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ಸಹೋದರರಿಗೆ ಹಿಸ್ಸೇ ಕೊಡಬಾರದೆಂಬ ಉದ್ದೇಶದಿಂದ ನನ್ನ ಪತ್ನಿಯ ಹೆಸರಿನಲ್ಲಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಐಟಂ ನಂ.೩ ಮತ್ತು ೫ ರಿಂದ ೭ ರ ಆಸ್ತಿಯ ಮೇಲೆ ನನಗೂ ಹಾಗೂ ಉಳಿದ ಪ್ರತಿವಾದಿಯರಿಗೂ (೪ ನೇ ಪ್ರತಿವಾದಿಯನ್ನು ಹೊರತುಪಡಿಸಿ) ಮತ್ತು ವಾದಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

**(೫ ನೇ ಪ್ರತಿವಾದಿ ಪರ ವಕೀಲರು ಮೆಮೋವನ್ನು ಸಲ್ಲಿಸಿ ೪ ನೇ ಪ್ರತಿವಾದಿಯವರ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಮರುವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.